## ಈ ಲೇಖನದ ವಿಷಯಾನುಕ್ರಮಣಿಕೆ


ಶಾಂತಿಗಳ ಆಚರಣೆಯ ಕ್ರಮ 2

ತಾಪತ್ರಯ ಎಂಬ ಶಬ್ದದ ಅರ್ಥ 3

ದೇವತೆಗಳು ತೊಂದರೆ ನೀಡುವದು ತಪ್ಪಲ್ಲವೇ? 6

ಶಾಂತಿಗಳ ವೈವಿಧ್ಯ 8

ನಮಸ್ಕಾರ, ಸ್ತೋತ್ರಗಳು ಸರ್ವಸರ್ವೋತ್ತಮ ಶಾಂತಿಕರ್ಮಗಳು 9

ಶಾಂತಿಕರ್ಮಗಳು 10

ಶ್ರೀಮದಾಚಾರ್ಯರು ತಿಳಿಸಿದ ಸರ್ವಶ್ರೇಷ್ಠ ಕ್ರಮ 13

ಶಾಂತಿಗಳನ್ನು ಆಚರಿಸಬೇಕಾದರೆ ಇರಬೇಕಾದ ಎಚ್ಚರಗಳು 15

## ಶಾಂತಿಗಳ ಆಚರಣೆಯ ಕ್ರಮ

ಶ್ರೀಯುತ ಮುದ್ಗಲ ಪ್ರಕಾಶ್ ರವರು ಅರವತ್ತನೇ ವರ್ಷದ ಶಾಂತಿಯನ್ನು ಮಾಡುವ ಶಾಸ್ತ್ರೀಯವಾದ ಮತ್ತು ಸುಲಭದ ಕ್ರಮವನ್ನು ತಿಳಿಸಿ ಎಂದು ವಿನಂತಿಸಿದ್ದಾರೆ[1].

ಈ ಲೇಖನದಲ್ಲಿ ಶಾಂತಿ ಎಂದರೇನು, ಯಾಕೆ ಮಾಡಬೇಕು, ಹೇಗೆ ಮಾಡಬೇಕು ಶಾಂತಿಗಳ ವೈವಿಧ್ಯವೇನು, ಮಾಡಬೇಕಾದರೆ ಇರಬೇಕಾದರೆ ಇರುವ ಎಚ್ಚರಗಳೇನು ಎನ್ನುವದರ ಕುರಿತು ತಿಳಿಸುತ್ತೇನೆ. ಮುಂದಿನ ಲೇಖನದಲ್ಲಿ ಅರವತ್ತನೇ ವರ್ಷದ ಶಾಂತಿಯ ಕ್ರಮವನ್ನು ತಿಳಿಸುತ್ತೇನೆ.

---

[1] ಮತ್ತೊಬ್ಬ ಸಜ್ಜನರೂ ಸಹ ಇದರ ಕುರಿತೇ ವಿನಂತಿಯನ್ನು ಸಲ್ಲಿಸಿದ್ದರು. ಹೆಸರು ಮರೆತು ಹೋಗಿದೆ. ಅವರಿಗಾಗಿಯೂ ಈ ಲೇಖನ.

## ತಾಪತ್ರಯ ಎಂಬ ಶಬ್ದದ ಅರ್ಥ

ನಾವು ತಾಪತ್ರಯ ಎನ್ನುವ ಶಬ್ದವನ್ನು ಮೇಲಿಂದ ಮೇಲೆ ಬಳಸುತ್ತೇವೆ. ಕಷ್ಟ ಎನ್ನುವ ಅರ್ಥದಲ್ಲಿ ಬಳಸುತ್ತೇವೆ. ಆದರೆ, ಶಾಸ್ತ್ರದಲ್ಲಿ ಇದಕ್ಕೆ ಸಾಮಾನ್ಯವಾಗಿ ಕಷ್ಟ ಎಂಬ ಅರ್ಥವಿಲ್ಲ. ಯಾವ ಕಷ್ಟ ಎಂದು ಸ್ಪಷ್ಟವಾಗಿ ನಿರ್ದೇಶವಿದೆ.

ತಾಪ ಎಂದ ಸಂತಾಪ, ನೋವು, ಕಷ್ಟ ಎಂದರ್ಥ. ತ್ರಯ ಎಂದರೆ ಮೂರು. ಹೀಗಾಗಿ ತಾಪತ್ರಯ ಎಂದರೆ  ಮೂರು ಕಷ್ಟಗಳು ಎಂದರ್ಥ.

ಶ್ರೀಮಟ್ಟೀಕಾಕೃತ್ಪಾದರು ಪ್ರಮೇಯದೀಪಿಕಾ ಗ್ರಂಥದಲ್ಲಿ ಮತ್ತು ಶ್ರೀ ಮಂತ್ರಾಲಯಪ್ರಭುಗಳು ತೈತ್ತಿರೀಯ ಉಪನಿಷತ್ತಿನ ಖಂಡಾರ್ಥದಲ್ಲಿ ತಾಪತ್ರಯ ಎಂದರೆ ಆಧಿದೈವಿಕ, ಆಧ್ಯಾತ್ಮಿಕ ಮತ್ತು ಆಧಿಭೌತಿಕ ಎಂಬ ಮೂರು ಕಷ್ಟಗಳು ಎಂದು ಅರ್ಥವನ್ನು ತಿಳಿಸಿದ್ದಾರೆ.
ಆತ್ಮ ಎನ್ನುವ ಶಬ್ದಕ್ಕೆ ದೇಹ ಎಂದೂ ಸಂಸ್ಕೃತದಲ್ಲಿ ಅರ್ಥವಿದೆ. ಆಧ್ಯಾತ್ಮಿಕ ತಾಪಗಳು ಎಂದರೆ ದೇಹದ ನ್ಯೂನತೆ ಸಮಸ್ಯೆಗಳಿಂದ ಉಂಟಾಗುವ

ಕುರುಡುತನ, ಕುಂಟುತನ, ತೊದಲುವಿಕೆ ಮುಂತಾದ ತೊಂದರೆಗಳು.

ಆಧಿಭೌತಿಕ ತಾಪಗಳು ಎಂದರೆ ಚಳಿ, ಮಳೆ, ಗಾಳಿ, ಸಮುದ್ರ ಮುಂತಾದ ಪಂಚಭೂತಗಳ ಕಾರ್ಯದಿಂದ ಉಂಟಾಗುವ ಅತೀವೃಷ್ಟಿ, ಕ್ಷಾಮ ಮುಂತಾದ ತೊಂದರೆಗಳು. ಪ್ರಾಕೃತಿಕ ವಿಕೋಪಗಳು.

ಆಧಿದೈವಿಕ ಎಂದರೆ ನಮ್ಮನ್ನು ನಿಯಮಿಸುವ ದೇವತೆಗಳಿಂದ ಉಂಟಾಗುವ, ಮರಣ, ಪ್ರೀತಿಪಾತ್ರರ ವಿಯೋಗ, ದುಷ್ಟಜನರ ಸಂಯೋಗ ಮುಂತಾದ ತಾಪಗಳು.

ಈ ಮೂರು ರೀತಿಯ ತಾಪಗಳಿಗೂ ನಮ್ಮ ಪ್ರಾಚೀನ ಕರ್ಮವೇ ಕಾರಣ. ನಾವು ಮಾಡಿದ ದುಷ್ಕರ್ಮಗಳೇ ಈ ಮೂರು ಕಷ್ಟಗಳಾಗಿ ನಮಗೆ ಒದಗಿಬರುತ್ತವೆ.

ದೇಹದಲ್ಲಿನ ಸಮಸ್ಯೆಗಳ ಪರಿಹಾರಕ್ಕಾಗಿ ಮನುಷ್ಯ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ಭಗವಂತನಿಗೆ ನಿವೇದಿಸಿದ ಪದಾರ್ಥಗಳನ್ನೇ

ಸ್ವೀಕರಿಸುತ್ತ, ಭಗವಂತ ಮಾಡಿರುವ ಶಾಸನದ ಪರಿಧಿಯಲ್ಲಿ ಬದುಕುವದರಿಂದ ನಾವು ಆಧ್ಯಾತ್ಮಿಕ ತಾಪಗಳನ್ನು ಗೆಲ್ಲುತ್ತೇವೆ.

ಪ್ರಕೃತಿಗೆ ತೊಂದರೆಯಾಗುವಂತೆ ಬದುಕದೆ, ಪ್ರಕೃತಿಗೆ ಆಪ್ಯಾಯಮಾನವಾಗಿ ಬದುಕುವದರಿಂದ ಪ್ರಾಕೃತಿಕ ವಿಕೋಪಗಳಿಂದ ನಾವು ಪಾರಾಗಬಹುದು.

ನಮ್ಮನ್ನು ನಿಯಮಿಸುವ ದೇವತೆಗಳು ಸಂತೋಷಪಡುವಂತೆ ನಾವು ಬದುಕುವದರಿಂದ, ಯಜ್ಞ, ತಪಸ್ಸು, ದಾನಗಳಿಂದ ಅವರನ್ನು ಒಲಿಸಿಕೊಳ್ಳುವದರಿಂದ ಆಧಿದೈವಿಕ ತಾಪಗಳಿಂದ ಮನುಷ್ಯ ದೂರವಾಗಲು ಸಾಧ್ಯ ಎಂದು ಶಾಸ್ತ್ರ ತಿಳಿಸುತ್ತದೆ —

**ಯಥಾ ಶಸ್ತ್ರಪ್ರಹಾರಾಣಾಂ**
**ಕವಚಂ ವಿನಿವಾರಕಮ್**
**ತಥಾ ದೈವೋಪಘಾತಾನಾಂ**
**ಶಾಂತಿರ್ಭವತಿ ವಾರಣಮ್**

ಕವಚ ಯಾವ ರೀತಿಯಲ್ಲಿ ಶಸ್ತ್ರಗಳ ಪ್ರಹಾರದಿಂದ ನಮ್ಮ ಶರೀರವನ್ನು ಕಾಪಾಡುತ್ತದೆಯೋ ಹಾಗೆ ಶಾಂತಿಕರ್ಮಗಳು ದೈವೋಪಘಾತ ಅಂದರೆ ಆಧಿದೈವಿಕ ತಾಪದಿಂದ ಅರ್ಥಾತ್ ಗ್ರಹ, ನಕ್ಷತ್ರ, ದೇವತೆಗಳಿಂದ ಉಂಟಾಗುವ ತೊಂದರೆಯಿಂದ ನಮ್ಮನ್ನು ಕಾಪಾಡುತ್ತದೆ.

## ದೇವತೆಗಳು ತೊಂದರೆ ನೀಡುವದು ತಪ್ಪಲ್ಲವೇ?

**ಇಲ್ಲಿ ಪ್ರಶ್ನೆ — ದೇವತೆಗಳು ಕರುಣಾಶೀಲರು, ಭಕ್ತರನ್ನು ರಕ್ಷಣೆ ಮಾಡಲಿಕ್ಕಾಗಿಯೇ ಇರುವವರು ಎಂದು ಶಾಸ್ತ್ರ ತಿಳಿಸುತ್ತದೆ. ಅಂದಮೇಲೆ ಅವರೇಕೆ ನಮಗೆ ತೊಂದರೆಯನ್ನುಂಟು ಮಾಡುತ್ತಾರೆ?**

ಬಹಳ ಮಹತ್ತ್ವದ ಪ್ರಶ್ನೆ. ಉತ್ತರ ಹೀಗಿದೆ — ಒಬ್ಬ ವ್ಯಕ್ತಿ ಮತ್ತೊಬ್ಬರ ಮೇಲೆ ವಿನಾಕಾರಣ ದ್ವೇಷ ಸಾಧಿಸುತ್ತ ಅವರಿಗೆ ತೊಂದರೆ ಕೊಡುವಂತೆ ದೇವತೆಗಳು ನಮಗೆ ತೊಂದರೆ ಕೊಡುವದಿಲ್ಲ.

ದೇವತೆಗಳಿಗೆ ಎರಡು ಕಾರ್ಯ — ನಮ್ಮ ಕರ್ಮಗಳ ಅನುಸಾರವಾಗಿ ನಮ್ಮನ್ನು ನಡೆಸುವದು.

ಸಂಸಾರದಲ್ಲಿ ಬಿದ್ದ ನಮ್ಮನ್ನು ಮೋಕ್ಷದ ಮಾರ್ಗದಲ್ಲಿ ಕರೆದೊಯ್ಯುವದು.

ನಾವು ಪ್ರಾಚೀನ ಜನ್ಮಗಳಲ್ಲಿ ಅನಂತಾನಂತ ಕರ್ಮಗಳನ್ನು ಮಾಡಿದ್ದೇವೆ. ಅವುಗಳಲ್ಲಿ ದುಷ್ಟಕರ್ಮಗಳೂ ಇವೆ. ಸತ್ಕರ್ಮಗಳೂ ಇವೆ. ಸತ್ಕರ್ಮಗಳ ಫಲವಾಗಿ ಸುಖವನ್ನು ಅನುಭವಿಸುತ್ತೇವೆ, ದುಷ್ಕರ್ಮಗಳ ಫಲವಾಗಿ ದುಃಖವನ್ನು ಅನುಭವಿಸುತ್ತೇವೆ. ನಮ್ಮ ಕರ್ಮಗಳ ಅನುಸಾರವಾಗಿ ನಮಗೆ ಸುಖ ದುಃಖಗಳನ್ನು ನೀಡುವ ಕಾರ್ಯವನ್ನು ಭಗವಂತ ದೇವತೆಗಳಿಗೆ ನೀಡಿದ್ದಾನೆ.

ಹೀಗಾಗಿ ದೇವತೆಗಳು ತಮ್ಮ ಕರ್ತವ್ಯವನ್ನು ನಿಭಾಯಿಸುತ್ತಾರೆಯಷ್ಟೇ ಹೊರತು ತಮ್ಮ ಶಕ್ತಿಯ ಮದದಿಂದ ನಮಗೆ ತೊಂದರೆ ನೀಡುವ ದುರ್ಜೀವರಲ್ಲ.

ಅಷ್ಟೇ ಆಲ್ಲ. ಆ ದೇವತೆಗಳ ಕಾರುಣ್ಯ ಎಷ್ಟು ಹಿರಿದಾದದ್ದು ಎಂದರೆ,  ಜ್ಯೋತಿಃಶಾಸ್ತ್ರದ ಮುಖಾಂತರ ನಮಗೆ ಉಂಟಾಗುವ

ತೊಂದರೆಗಳನ್ನು ನಮಗೆ ಮೊದಲೇ ತಿಳಿಸುತ್ತಾರೆ. ಜ್ಯೋತಿಃಶಾಸ್ತ್ರ ಇದು ಸೂಚಕಶಾಸ್ತ್ರ, ಅಂದರೆ ಮುಂದೇನಾಗುತ್ತದೆ ಎನ್ನುವದನ್ನು ಸೂಚನೆ ಮಾಡುವ ಶಾಸ್ತ್ರ. ನಮ್ಮ ಜಾತಕದಲ್ಲಿರುವ ಗ್ರಹನಕ್ಷತ್ರಗಳ ಪರಿಸ್ಥಿತಿಯನ್ನು ನೋಡಿಕೊಂಡು ಮುಂಬರುವ ತೊಂದರೆಗಳಿಗೆ ಮೊದಲೇ ಶಾಂತಿಯನ್ನು ಮಾಡಿಸಿದಾಗ, ಅಥವಾ ತೊಂದರೆ ಆರಂಭವಾದ ಬಳಿಕ ಯಾವ ಗ್ರಹ ತೊಂದರೆಯನ್ನು ಸೂಚಿಸುತ್ತಿದೆ ಎಂದು ತಿಳಿದು ಅದಕ್ಕೆ ತಕ್ಕ ಹಾಗೆ ಶಾಂತಿಯನ್ನು ಮಾಡಿದಾಗ ದೇವತೆಗಳು ಪ್ರಸನ್ನರಾಗಿ ಆ ದುಷ್ಟಕರ್ಮವನ್ನು ವಿನಾಶ ಮಾಡುತ್ತಾರೆ. ವಿನಾಶ ಮಾಡಲಿಕ್ಕೆ ಸಾಧ್ಯವಿಲ್ಲದಷ್ಟು ಆ ಕರ್ಮ ಪ್ರಬಲವಾಗಿದ್ದರೆ ಅದರ ಪರಿಣಾಮವನ್ನು ಕಡಿಮೆಗೊಳಿಸುತ್ತಾರೆ.

## ಶಾಂತಿಗಳ ವೈವಿಧ್ಯ

ನಮ್ಮ ಕಷ್ಟಗಳ ಪರಿಹಾರಕ್ಕಾಗಿ ದೇವತೆಗಳನ್ನು ಕುರಿತು ನಾವು ಮಾಡುವ ಎಲ್ಲ ವಿಧದ ಕರ್ಮಗಳು ಶಾಂತಿ ಎಂದು ಕರೆಸಿಕೊಳ್ಳುತ್ತವೆ.

# ನಮಸ್ಕಾರ, ಸ್ತೋತ್ರಗಳು ಸರ್ವಸರ್ವೋತ್ತಮ ಶಾಂತಿಕರ್ಮಗಳು

ಸರ್ವಸರ್ವೋತ್ತಮವಾದ ಶಾಂತಿಕರ್ಮ, ದೇವರಿಗೆ ಮಾಡುವ ನಮಸ್ಕಾರ ಮತ್ತು ನಾವು ಮಾಡುವ ಸ್ತೋತ್ರ. ವೇದಗಳಲ್ಲಿಯೇ ಈ ಮಾತು ಬಂದಿದೆ — **“यजाम देवान् यदि शक्नवाम मा ज्यायस: शंसमा वृक्षि देवा:”** ಶಾಸ್ತ್ರ ತಿಳಿಸುವ ರೀತಿಯಲ್ಲಿ ನಮಗೆ ಹೋಮ ಹವನಗಳನ್ನು ಮಾಡುವ ಯೋಗ್ಯತೆಯಿದ್ದಲ್ಲಿ ನಾವು ಆ ಕರ್ಮ ಮಾಡೋಣ, ಆದರೆ ಅಷ್ಟು ಶಕ್ತಿ ಇಲ್ಲದಿದ್ದಲ್ಲಿ ಅವರ ಸ್ತೋತ್ರವನ್ನು ಮಾಡೋಣ, ಸ್ತೋತ್ರ ಮಾಡಲೂ ಅಶಕ್ತರನ್ನಾಗಿ ನಮ್ಮನ್ನು ಮಾಡಬೇಡಿ ಎನ್ನುವದು ಈ ವೇದಮಂತ್ರದ ಅಭಿಪ್ರಾಯ.

ಹೋಮ, ದಾನ, ಯಾತ್ರೆ ಮುಂತಾದವೆಲ್ಲ ಹಣವಿದ್ದವರಿಗೆ ಸಾಧ್ಯವಾಗುವಂತದ್ದು. ಅವನ್ನು ಮಾಡುವ ಹಣವಾಗಲೀ, ಅರ್ಹತೆಯಾಗಲೀ ಇಲ್ಲದಿದ್ದಾಗ, ಚಿಂತೆ ಬೇಡ, ಭಕ್ತಿಯಿಂದ ಆ ದೇವತೆಗಳನ್ನು ಸ್ತೋತ್ರಮಾಡಿ ಅವರಿಗೆ

ನಮಸ್ಕರಿಸಿದಲ್ಲಿ ಅವರು ನಮ್ಮ ಎಲ್ಲ ಆಪತ್ತುಗಳನ್ನೂ ಕಳೆಯುತ್ತಾರೆ.

## ಶಾಂತಿಕರ್ಮಗಳು

ಎರಡನೆಯ ಶಾಂತಿಗಳು ಶಾಸ್ತ್ರದಲ್ಲಿ ತಿಳಿಸಿ ಹೇಳಿದ ಶಾಂತಿಕರ್ಮಗಳು. ಇವನ್ನು ಶಾಂತಿಕ ಎಂದೂ ಕರೆಯುತ್ತಾರೆ. ಅಸ್ಮಿನ್ ಶಾಂತಿಕೇ ಕರ್ಮಣಿ ಎಂದೇ ಪ್ರಯೋಗವಿದೆ.

**ಬಂದಿರುವ ಅಥವಾ ಮುಂಬರುವ ಆಪತ್ತಿನ ಪರಿಹಾರಕ್ಕಾಗಿ ಶಾಸ್ತ್ರ ವಿಧಿಸುವ ಜಪ, ಹೋಮ, ದಾನ, ಯಾತ್ರೆಗಳಿಗೆ ಶಾಂತಿ ಅಥವಾ ಶಾಂತಿಕ ಎಂದು ಹೆಸರು.**

ಈ ಶಾಂತಿಗಳು ನೂರಾರು ಸಂಖ್ಯೆಯಲ್ಲಿವೆ. ನಮ್ಮ ಹುಟ್ಟಿನಿಂದ ಆರಂಭಿಸಿ ಸಾವಿನವರೆಗೂ ಶಾಂತಿಗಳಿವೆ.

ಹಾಗೆ ನೋಡಿದರೆ ನಾವು ನಮ್ಮ ಜೀವನದ ಪ್ರತೀ ಹೆಜ್ಜೆಯಲ್ಲಿ ಶಾಂತಿಕರ್ಮಗಳನ್ನು ಆಚರಿಸಿಯೇ ಮುಂದುವರೆಯಬೇಕು.

ದುಷ್ಟ ನಕ್ಷತ್ರಗಳಲ್ಲಿ ಹುಟ್ಟಿದರೂ ಶಾಂತಿಯಾಗಬೇಕು. ದುಷ್ಟ ನಕ್ಷತ್ರಗಳಲ್ಲಿ ನಮ್ಮ ಮನೆಯಲ್ಲಿ ಯಾರಾದರೂ ಮರಣ ಹೊಂದಿದರೂ ನಾವು ಶಾಂತಿ ಮಾಡಿಕೊಳ್ಳಲೇಬೇಕು.

ಜ್ಯೇಷ್ಠಾ, ಮೂಲ, ಆಶ್ಲೇಷಾ ಮುಂತಾದ ನಕ್ಷತ್ರಗಳಲ್ಲಿ ಕೃಷ್ಣಚತುರ್ದಶೀ, ಅಮಾವಾಸ್ಯಾ ಮುಂತಾದ ದಿವಸಗಳಲ್ಲಿ, ವೈಧೃತಿ ವ್ಯತೀಪಾತ ಮುಂತಾದ ಯೋಗಗಳಲ್ಲಿ, ವಿಷಘಳಿಗೆಗಳಲ್ಲಿ ಮಗು ಜನಿಸಿದಾಗ ಶಾಂತಿಯನ್ನು ಆಚರಿಸಬೇಕು.

ಅವಳೀ ಮಕ್ಕಳು ಹುಟ್ಟಿದಾಗ, ಸಮಸ್ಯೆಗಳಿಂದ ಯುಕ್ತವಾಗಿ ಹುಟ್ಟಿದಾಗ ಶಾಂತಿಗಳನ್ನು ಆಚರಿಸಬೇಕು.
ಹಾಗೆಯೇ ಮಗು ಹುಟ್ಟಿದ ಒಂದು ವರ್ಷದಲ್ಲಿ ಶಾಂತಿಯಾಗಬೇಕು. 50. 60, 70, 80, 90ನೇ ವರ್ಷಗಳು ನಡೆಯುವಾಗ ಶಾಂತಿಯಾಗಬೇಕು.

ಹೆಣ್ಣುಮಕ್ಕಳು ಋತುಮತಿಯಾದಾಗ ಶಾಂತಿಯಿದೆ, ಪ್ರಸವಕಾಲದಲ್ಲಿ ಶಾಂತಿಯಿದೆ.

ತ್ರಿಪಾದೀ ನಕ್ಷತ್ರಗಳಾದ ಕೃತ್ತಿಕಾ, ಪುನರ್ವಸು, ಉತ್ತರಾ, ವಿಶಾಖಾ, ಉತ್ತರಾಷಾಢಾ, ಪೂರ್ವಾಭಾದ್ರಾಗಳಲ್ಲಿ,  ಪಂಚಕನಕ್ಷತ್ರಗಳಾದ ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರಾ, ಉತ್ತರಾಭಾದ್ರಪದಾ, ರೇವತಿಗಳಲ್ಲಿ ಮರಣವಾದರೆ ಶಾಂತಿಯಾಗಬೇಕು.

ಸಿಂಹದಲ್ಲಿ ರವಿಯಿದ್ದಾಗ ಗೋವು ಕರುವನ್ನು ಹಾಕಿದರೆ ಶಾಂತಿಯಿದೆ, ಬಾವಿಯನ್ನು ತೋಡಿಸಿದರೆ ಶಾಂತಿಯಿದೆ, ಮರಗಳನ್ನು ಕತ್ತರಿಸಿದರೆ ಶಾಂತಿಯಿದೆ.

ಹೀಗೆ ಶಾಂತಿಕರ್ಮಗಳು ಜನನದಿಂದ ಮರಣದವರೆಗೆ, ಜೀವನದ ಪ್ರತಿಯೊಂದು ಹಂತದಲ್ಲಿಯೂ ಇವೆ.

## ಶ್ರೀಮದಾಚಾರ್ಯರು ತಿಳಿಸಿದ ಸರ್ವಶ್ರೇಷ್ಠ ಕ್ರಮ

ಶಾಂತಿಕರ್ಮಗಳ ಈ ಪಟ್ಟಿಯನ್ನು ನೋಡಿದಾಗ ನಮಗೆ ಸಾಧ್ಯವೇ ಎಂಬ ಪ್ರಶ್ನೆ ಮೂಡುವದು ಸಹಜ. ಮತ್ತು ಶಾಂತಿಕರ್ಮಗಳ ಆಚರಣೆಯನ್ನು ಮಾಡಲು ಹಣದ ಆವಶ್ಯಕತೆ ಇದೆ, ಸಂಶಯವಿಲ್ಲ.

ಹಣಕ್ಕಿಂತ ದೊಡ್ಡ ಸಮಸ್ಯೆ ಎಂದರೆ ಇಂದಿನ ದಿವಸಗಳಲ್ಲಿ ಪರಿಶುದ್ಧ ಪದಾರ್ಥಗಳೇ ದೊರೆಯುವದಿಲ್ಲ. ಹಂದಿ ಮುಂತಾದ ಪ್ರಾಣಿಗಳ ಕೊಬ್ಬಿನಿಂದ ತಯಾರಿಸಿದ ತುಪ್ಪ, ಪ್ಲಾಸ್ಟಿಕ್ಕು, ಕಬ್ಬಿಣ ಮತ್ತು ನಕಲೀಪದಾರ್ಥಗಳದೇ ರಾಜ್ಯಭಾರವಿರುವ ಈ ನ'ಕಲೀಯುಗ'ದಲ್ಲಿ ಶುದ್ಧ ಪದಾರ್ಥಗಳೇ ಇರುವದಿಲ್ಲ. ಗೋಮೂತ್ರ ಗೋಮಯಗಳಲನ್ನು ಮಾರಾಟ ಮಾಡುವ, ಕೊಂಡು ಕೊಳ್ಳುವ ಹೀನಾಯ ಪರಿಸ್ಥಿತಿ ಇರುವ ಈ ಕಾಲದಲ್ಲಿ ಏನು ತಾನೇ ಧರ್ಮಾಚರಣೆ ಮಾಡಲು ಸಾಧ್ಯ?

ಆದರೆ, ಶ್ರೀಮದಾನಂದತೀರ್ಥಭಗವತ್ಪಾದಾ-ಚಾರ್ಯರ ಕಾರುಣ್ಯ ಅಪಾರವಾದದ್ದು. ಅವರು

ಅನುಗ್ರಹ ಮಾಡಿ ನಮಗೆ ಸುಲಭದ ಉಪಾಯವನ್ನು ತಿಳಿಸಿದ್ದಾರೆ.

ತೈತ್ತಿರೀಯ ಉಪನಿಷತ್ತಿಗೆ ವ್ಯಾಖ್ಯಾನವನ್ನು ಮಾಡುತ್ತ ಆಚಾರ್ಯರು — **यं यं क्रतुमधीते तेन तेनास्येष्टं भवति** ಎಂಬ ವೇದವಚನದ ಆಧಾರದಿಂದ ಬ್ರಾಹ್ಮಣನಾದವನು ಯಾವ ಯಾವ ಯಜ್ಞದ ಕುರಿತ ಅಧ್ಯಯನವನ್ನು ಮಾಡುತ್ತಾನೆಯೋ, ಆ ಅಧ್ಯಯನದಿಂದಲೇ ಆ ಯಜ್ಞದ ಫಲವನ್ನು ಪಡೆಯುತ್ತಾನೆ ಎಂದು ಪ್ರತಿಪಾದನೆ ಮಾಡುತ್ತಾರೆ.

ಹೀಗಾಗಿ ಹಣವಿರಲಿ ಬಿಡಲಿ, ಆ ಶಾಂತಿಯ ಕರ್ಮವನ್ನು ಆಚರಣೆ ಮಾಡುವ ಪ್ರಸಕ್ತಿ ಬಂದಾಗ ಆ ಶಾಂತಿಯ ಮಂತ್ರಗಳ ಅರ್ಥವನ್ನು ಪರಿಪೂರ್ಣವಾಗಿ ತಿಳಿದು ಪಠಣ ಮಾಡಿದಲ್ಲಿ ಕರುಣಾಳುವಾದ ಶ್ರೀಹರಿ ಅನುಗ್ರಹಿಸಿಯೇ ಅನುಗ್ರಹಿಸುತ್ತಾನೆ, ಅರಿಷ್ಟಗಳನ್ನು ದೂರ ಮಾಡುತ್ತಾನೆ.

## ಶಾಂತಿಗಳನ್ನು ಆಚರಿಸಬೇಕಾದರೆ ಇರಬೇಕಾದ ಎಚ್ಚರಗಳು

ಭಗವಂತ ಹಣವನ್ನು ಅನುಗ್ರಹಿಸಿದ್ದರೆ ಕ್ರಿಯಾಯುಕ್ತವಾಗಿವೇ ಶಾಂತಿಕರ್ಮವನ್ನು ಆಚರಿಸಿ. ಆದರೆ ಯಾವುದೇ ಹೋಮ ಹವನವನ್ನು ಮಾಡಬೇಕಾದರೆ ಶುದ್ಧ ಪದಾರ್ಥಗಳನ್ನು ಪ್ರಯತ್ನ ಪಟ್ಟು ಸಂಪಾದಿಸಿ ಹೋಮ ಹವನವನ್ನು ಮಾಡಿ.

ತೀರ, ಅಗ್ನಿಯ ಮುಂದೆ ಕುಳಿತು ಪ್ಲಾಸ್ಟಿಕ್ಕಿನ ಪ್ಯಾಕೆಟ್ಟನ್ನು ಕತ್ತರಿಸಿ ತುಪ್ಪವನ್ನು ಪಾತ್ರೆಗೆ ಹಾಕಿ ಹೋಮ ಮಾಡಬೇಡಿ. ಈ ರೀತಿಯಾದ ಅನಾಚಾರಗಳಿಂದ ಸರ್ವಥಾ ಉನ್ನತಿ ಉಂಟಾಗುವದಿಲ್ಲ, ಕಿಂತು ಅನರ್ಥವೇ ಉಂಟಾಗುತ್ತದೆ.

ಇವತ್ತಿಗೆ ಶುದ್ಧ ಪದಾರ್ಥಗಳು ದೊರೆಯುವದು ಅಸಾಧ್ಯ ಎನ್ನುವ ಮಟ್ಟಿಗೆ ಮುಟ್ಟಿದೆ. ಹೋಮದ ಕುಂಡ ಹಾಕಿದರೆ ಮನೆಯ ನೆಲ ಹಾಳಾಗುತ್ತದೆ ಎಂದು ಕಬ್ಬಿಣದ ಹೋಮಕುಂಡದಲ್ಲಿ ಹೋಮ

ಮಾಡುವ ಅನಾಚಾರ ಆರಂಭವಾಗಿದೆ. ಈ ರೀತಿಯಾದ ಅನಾಚಾರಗಳು ಸರ್ವಥಾ ಬೇಡ.

ಹಾಗೆಂದು ಶಾಂತಿಕರ್ಮಗಳನ್ನೂ ಮಾಡಿಕೊಳ್ಳದೇ ಇರಬಾರದು. ಯಾರು ನಿಜವಾದ ಭಕ್ತಿಯಿಂದ ದೇವರ ಆರಾಧನೆ ಮಾಡುತ್ತಾರೆಯೋ ಅಂತಹ ಸಜ್ಜನ ಮತ್ತು ನಿಃಸ್ಪೃಹ ಪುರೋಹಿತರಿಂದ ಎಷ್ಟು ಸಾಧ್ಯವೋ ಅಷ್ಟೂ ಪ್ರಯತ್ನ ಪಟ್ಟು ಶುದ್ಧವಾದ ರೀತಿಯಲ್ಲಿ ಆಚರಿಸಿ.

ಇದಕ್ಕಿಂತ ಮಹತ್ತ್ವದ ಕ್ರಮ ಎಂದರೆ ನಿಮ್ಮ ಮಗುವಿಗೆ ಮೊದಲನೇ ವರ್ಷದ ಶಾಂತಿಯೋ, ಅಥವಾ ನಿಮಗೇ ಅರವತ್ತನೇ ವರ್ಷದ ಶಾಂತಿಯೋ ಮಾಡಬೇಕಿದೆ ಎಂದಿಟ್ಟುಕೊಳ್ಳೋಣ. ಸುಮಾರು ಒಂದು ತಿಂಗಳಿಗೆ ಮುಂಚೆಯೇ ಆ ಶಾಂತಿಕರ್ಮದ ಪುಸ್ತಕವನ್ನು ಕೊಂಡು ತನ್ನಿ.

ಅದನ್ನು ಗುರುಗಳಿಂದ ಹೇಳಿಸಿಕೊಂಡು ಪಠಣ ಮಾಡಲು ಆರಂಭಿಸಿ. ಶಾಂತಿಯ ದಿವಸದಲ್ಲಿ ಅದನ್ನು ಪಠಣ ಮಾಡಿ.

**ಉತ್ತಮ ಮಾಹಿತಿಯನ್ನು ನೀಡುವ ಪುಸ್ತಕಗಳು ಇವತ್ತಿಗೆ ಕಡಿಮೆಯೇ ಆಗಿವೆ. ಶ್ರೀಹರಿ ವಾಯು ಗುರುಗಳು ನಿಮಗೆ ಒಂದು ಪುಸ್ತಕ ಮುದ್ರಣ ಮಾಡಿಸುವ ಶಕ್ತಿ ನೀಡಿದ್ದರೆ, ಉತ್ತಮ ವಿದ್ವಾಂಸರನ್ನು ಸಂಪರ್ಕಿಸಿ ನಿಮಗಪೇಕ್ಷಿತವಾದ ಶಾಂತಿಯ ಪುಸ್ತಕವನ್ನು ಬರೆಯಿಸಿ ಪ್ರಕಟ ಮಾಡಿಸಿ. ಅದನ್ನು ಯಾರುಯಾರು ಓದಿ ಅನುಷ್ಠಾನ ಮಾಡುತ್ತಾರೆಯೋ ಅದೆಲ್ಲದರಿಂದಲೂ ಮಹಾಪುಣ್ಯ ಒದಗಿಬರುತ್ತದೆ.**

**ಸಜ್ಜನರಿಗೆ ಜ್ಞಾನವನ್ನು ನೀಡುವದಕ್ಕಿಂತ ಮಿಗಿಲಾದ ಯಜ್ಞವುಂಟೇ?**

ಶ್ರೀಮದಾಚಾರ್ಯರು ಅನುಗ್ರಹ ಮಾಡಿ ತಿಳಿಸಿರುವಂತೆ ಕರ್ಮದ ಪ್ರಕ್ರಿಯೆಗಳನ್ನು ಮಂತ್ರಗಳನ್ನು ಅಧ್ಯಯನ ಮಾಡುವದರಿಂದ ನಾವು ಕರ್ಮದ ಅನುಷ್ಠಾನ ಮಾಡಿದ ಫಲವನ್ನು ಪಡೆದೇ ಪಡೆಯುತ್ತೇವೆ. ಹೀಗಾಗಿ ಅವಶ್ಯವಾಗಿ ಅಧ್ಯಯನ ಮಾಡಿ.

ಇನ್ನು ಶಾಂತಿ ಮಾಡುವ ಸಂದರ್ಭದಲ್ಲಿ, ಹೋಮದ ಸಂದರ್ಭದಲ್ಲಿ ಒಟ್ಟಾರೆ ಆ ದಿವಸ ಫೋನು, ಹರಟೆಗಳಿಂದ ದೂರವಿರಿ. ಫೋನಿನಲ್ಲಿ ಮಾತನಾಡುತ್ತ ಹೋಮಕ್ಕೆ ತುಪ್ಪ ಸುರಿಯುವ ಅನಾಚಾರ ನಡೆಯುವದು ಬೇಡ. ಭಗವಂತನನ್ನು ದೇವತೆಗಳನ್ನು ಆವಾಹಿಸಿ ಪೂಜೆ ಸಲ್ಲಿಸುತ್ತಿದ್ದೇವೆ ಎನ್ನುವ ಎಚ್ಚರ ಗಾಢವಾಗಿರಲಿ.

ಈ ಎಲ್ಲ ವಿಧವಾದ ಶಾಂತಿಕರ್ಮಗಳಲ್ಲಿ "ವರದ" ಎಂಬ ಹೆಸರಿನ ಅಗ್ನಿಯನ್ನು ಆವಾಹಿಸಿ ಆ ಅಗ್ನಿಗೆ ಆಹುತಿಗಳನ್ನು ಸಮರ್ಪಿಸಬೇಕು ಎಂದು ಗೋಭಿಲರು ತಿಳಿಸುತ್ತಾರೆ —

**ಪೂರ್ಣಾಹುತ್ಯಾಂ ಮೃಡೋ ನಾಮ**
**ಶಾಂತಿಕೇ ವರದಃ ಸದಾ**

ಸದಾ ಶಾಂತಿಕೇ ಎಲ್ಲ ವಿಧವಾದ ಶಾಂತಿಕರ್ಮಗಳಲ್ಲಿ ವರದಃ ವರದ ಎಂಬ ಹೆಸರಿನ ಅಗ್ನಿಯಲ್ಲಿ ಆಹುತಿಗಳನ್ನು ಸಮರ್ಪಿಸಬೇಕು. ಆ ಅಗ್ನಿಯ ವಿಶೇಷ ಸ್ಮರಣೆಯನ್ನು ನಿರಂತರ ಮಾಡುತ್ತಿರಿ.

ಶಾಂತಿಕರ್ಮವನ್ನು ಮಾಡುವವರು ಅವಶ್ಯವಾಗಿ ಮಾಡಲೇಬೇಕಾದ ಸತ್ಕರ್ಮ ಅನ್ನಸಂತರ್ಪಣೆ. ಕನಿಷ್ಠಪಕ್ಷ ಒಬ್ಬ ಬ್ರಾಹ್ಮಣ ದಂಪತಿಗಳಿಗೆ ಒಬ್ಬ ಬ್ರಹ್ಮಚಾರಿಗೆ ಭೋಜನವನ್ನು ನೀಡಿ. ಆ ನಂತರ ನಿಮ್ಮ ಶಕ್ತಿಗೆ ಬಿಟ್ಟದ್ದು.

ಭೋಜನಕ್ಕೆ ಕರೆಯಬೇಕಾದರೆ ಭಕ್ತಿಯುಕ್ತರಾದ ಸಜ್ಜನರನ್ನೇ ಕರೆಯಿರಿ. ಜ್ಞಾನಿಗಳು, ಭಕ್ತರು ನಮ್ಮ ಮನೆಯಲ್ಲಿ ಒಂದು ದಿವಸ ಉಂಡರೆ ನಮ್ಮ ನೂರು ತಲೆಮಾರಿನ ಪಿತೃಗಳು ಉದ್ಧೃತರಾಗುತ್ತಾರೆ.

ಉತ್ತಮ ಬ್ರಾಹ್ಮಣರು ಊಟ ಮಾಡುವಷ್ಟು ಶುದ್ಧಿ ಮನೆಯಲ್ಲಿ ಇಲ್ಲವೆಂದಾದಲ್ಲಿ ಅವರ ಮನೆಗೆ ಅಡಿಗೆಯ ಪದಾರ್ಥಗಳನ್ನು ಕೊಟ್ಟು ಶಾಂತಿಯ ದಿವಸ ಈ ಪದಾರ್ಥಗಳಿಂದ ಅಡಿಗೆ ಮಾಡಿ ಶ್ರೀಹರಿಗೆ ಸಮರ್ಪಿಸಿ ಉಣ್ಣಬೇಕು ಎಂದು ಪ್ರಾರ್ಥಿಸಿ ಬನ್ನಿ.

ಹಾಗೆ, ನಿಮ್ಮ ಮನೆಯ ಶುದ್ಧಿಯಲ್ಲಿಯೇ ಊಟ ಮಾಡುವ ಉತ್ತಮ ಸಜ್ಜನರಿಗೆ ಭೋಜನವನ್ನು

ನೀಡಿ, ಬಂಧು ಬಾಂಧವರ ಜೊತೆಗೂಡಿ ಭೋಜನವನ್ನು ಮಾಡಿ.

ಆ ಬಳಿಕ ಬಂದ ಬ್ರಾಹ್ಮಣರಿಗೂ, ಬಾಂಧವರಿಗೂ ದಕ್ಷಿಣೆ ತಾಂಬೂಲಗಳನ್ನು ನೀಡಿ ಹಿರಿಯರಿಗೆ ಭಕ್ತಿಯಿಂದ ನಮಸ್ಕಾರಗಳನ್ನು ಮಾಡಿ.

ಆ ನಂತರ ಸಮಗ್ರ ಕರ್ಮವನ್ನು ಗುರು-ದೇವತೆಗಳ ಅಂತರ್ಯಾಮಿಯಾದ ಮಧ್ವವಲ್ಲಭ ಶ್ರೀಮದುಡುಪಿನ ಶ್ರೀಕೃಷ್ಣನಿಗೆ ಸಮರ್ಪಿಸಿ.

ಇದು ಯಾವುದು ಮಾಡುವ ಸಾಮರ್ಥ್ಯ, ಅವಕಾಶಗಳಿಲ್ಲ ಎಂದರೆ ಸರ್ವಥಾ ಚಿಂತೆ ಮಾಡಬೇಡಿ. ಶ್ರೀಮನ್ನಾರಾಯಣನ ನಾಮಸ್ಮರಣೆ, ಅವನಿಗೆ ಸಮರ್ಪಿಸುವ ನಮಸ್ಕಾರ ಸಕಲ ಆಪತ್ತುಗಳನ್ನೂ ದೂರ ಮಾಡುತ್ತದೆ.

ಶಾಂತಿ ಎನ್ನುವ ಶಬ್ದಕ್ಕೆ ಮೋಕ್ಷ ಎನ್ನುವದೇ ಪ್ರಧಾನ ಅರ್ಥ ಎಂದು ಶ್ರೀಮದಾಚಾರ್ಯರು ಅನೇಕ ಕಡೆಗಳಲ್ಲಿ ಪ್ರತಿಪಾದಿಸಿದ್ದಾರೆ. ಯಾರಿಗೂ ಕಳೆಯಲಾಗದ ಮಹಾ ಆಪತ್ತಾದ ಸಂಸಾರವನ್ನೇ ಕಳೆದು ಮೋಕ್ಷವನ್ನು ಅನುಗ್ರಹಿಸುವ

ಪಟ್ಟಾಭಿರಾಮನ ನಾಮಸ್ಮರಣೆಗಿಂತ ಮಿಗಿಲಾದ ಶಾಂತಿಕರ್ಮವುಂಟೇ.

ಶ್ರೀಹರಿ ನಿಮ್ಮ ಎಲ್ಲ ಕಷ್ಟಗಳನ್ನು ದೂರ ಮಾಡಲಿ, ನಿಮ್ಮ ಮನೆಯವರನ್ನು ಸೌಖ್ಯದಲ್ಲಿಟ್ಟರಲಿ ಮುಖ್ಯವಾಗಿ ತನ್ನ ಸ್ಮರಣೆಯನ್ನು ಅನುಗ್ರಹಿಸಿ ನಿಮ್ಮೆಲ್ಲರಿಂದ ಉತ್ತಮ ಸಾಧನೆಯನ್ನು ಮಾಡಿಸಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491